OS 48/2019
DW-02

ದಿನಾಂಕಃ 07-03-2026.

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲುಃ ವಾದಿಯ ಪರವಾಗಿ ಶ್ರೀ SS ಮಾನ್ಯ ವಕೀಲರಿಂದಃ**

1. ನನ್ನ ಜನ್ಮ ದಿನಾಂಕ 01-08-1950. 1 ನೇ ಪ್ರತಿವಾದಿಯ ತಂದೆಯ ಹೆಸರು ಶ್ರೀ ಅಬ್ದುಲ್ ಸಾಬ್ ನಾನು 1 ನೇ ಪ್ರತಿವಾದಿಯ ಸದರಿ ತಂದೆಯವರನ್ನು ನೋಡಿರುತ್ತೇನೆ. ಪ್ರತಿವಾದಿಯ ಸದರಿ ತಂದೆಯವರು ತೀರಿಕೊಂಡು ಈಗ 25 ರಿಂದ 26 ವರ್ಷಗಳಾಗಿರುತ್ತವೆ. ಸದರಿಯವರು ತೀರಿಕೊಂಡಿದ್ದಾಗ ನನ್ನ ವಯಸ್ಸು 35 ಇತ್ತು. ಸದರಿ ಅಬ್ದುಲ್ ಸಾಬ್ ಇವರು ತೀರಿಕೊಂಡ ಸಂದರ್ಭದಲ್ಲಿ 1 ನೇ ಪ್ರತಿವಾದಿ ವಯಸ್ಸು 40 ಇತ್ತು. ಸದರಿ ಅಬ್ದುಲ್ ಸಾಬ್ ಇವರಿಗೆ ನಾಲ್ಕು ಜನ ಗಂಡು ಮಕ್ಕಳು ಇರುತ್ತಾರೆ, ಅವರೇಂದರೆ ಶ್ರೀ ಜಲಾಲ್, ಶ್ರೀ ಇಕ್ಬಾಲ್ ಎಂದು ಇದ್ದು ನನಗೆ ಇನ್ನು ಇಬ್ಬರ ಹೆಸರುಗಳು ಹೇಳಲು ನೆನಪಿರುವುದಿಲ್ಲ.

2. ಸದರಿ ಅಬ್ದುಲ್ ಸಾಬ್ ಇವರ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ನಾನು ಸದರಿಯವರ ತಂದೆಯವರನ್ನು ನೋಡಿರುವುದಿಲ್ಲ. ನನಗೆ ಪ್ರತಿವಾದಿಗಳ ಪಿರ್ತಾಜ್ರಿತ ಸ್ವತ್ತುಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿಗಳ ಅಜ್ಜ ಶ್ರೀ ದಾವಲ್ ಸಾಬ್ ಇವರಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವಲ್ ಸಾಬ್ ಇವರ ಮಕ್ಕಳು ಬೇರೆ ಬೇರೆಯಾಗಿ ವಾಸ ಮಾಡುತ್ತಾರೆ. ಸದರಿ ದಾವಲ್ ಸಾಬ್ ಇವರ ಮಕ್ಕಳಿಗೆ ವಾಟ್ನಿಯಲ್ಲಿ ಯಾರ್ಯಾರಿಗೆ ಎಷ್ಟೇಷ್ಟು ಸ್ವತ್ತು ಬಂದಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಈಗ ದಾವಾ ಸ್ವತ್ತುಗಳು 1 ನೇ ಪ್ರತಿವಾದಿಗೆ ಯಾವ ರೀತಿ ಬಂದಿರುತ್ತವೆ ಎಂದು ಕೇಳಿದ್ದಕ್ಕೆ ಸಾಕ್ಷಿ ತಮಗೆ ದಾವಾ ಅನುಸೂಚಿ-ಸಿ ಸ್ವತ್ತಿನ ಬಗ್ಗೆ ಮಾತ್ರ ತಿಳಿದಿರುವುದಾಗಿ ಹೇಳುತ್ತಾರೆ. ಉಳಿದ ದಾವಾ

ಸ್ವತ್ತುಗಳು 1 ನೇ ಪ್ರತಿವಾದಿಗೆ ಯಾವ ರೀತಿ ಬಂದಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

3. ನನಗೆ ವಾದಿಯ ತಂದೆಯ ಹೆಸರು ಗೊತ್ತಿರುವುದಿಲ್ಲ. ಸದರಿ ದಾವಲ್ ಸಾಬ್ ಇವರ ಜೀವಂತ ಕಾಲಾವಧಿಯಲ್ಲಿ ಅವರ ಮಕ್ಕಳು ಬೇರೆ ಬೇರೆಯಾಗಿದ್ದರೋ ಅಥವಾ ಕೂಡಿಯಾಗಿದ್ದರೋ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ದಾವಾ ಅನುಸೂಚಿ -ಸಿ ಸ್ವತ್ತಿನ ಚೆಕ್ ಬಂದಿ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯ ತಂದೆ ಸದರಿ ಸ್ವತ್ತನ್ನು ಖರೀದಿ ಮಾಡಿದ್ದು ಅದರ ಖರೀದಿ ಪತ್ರಕ್ಕೆ ಸಹಿ ಮಾಡಲು ನನಗೆ ಕರೆದಿದ್ದರಿಂದ ನಾನು ಹೋಗಿರುತ್ತೇನೆ ಎಂದರೆ ಸರಿ ಹಾಗೂ ನನಗೆ ಸದರಿ ಖರೀದಿಯ ಉಳಿದ ವಿಚಾರಗಳ ಬಗ್ಗೆ ಗೊತ್ತಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯ ಅಣ್ಣ ತಮ್ಮಂದಿಯರು ನನ್ನ ಸ್ನೇಹಿತರು ಎಂದರೆ ಸರಿ. ನನ್ನ ಹಾಗೂ ಪ್ರತಿವಾದಿಗಳ ಮನೆ 500 ಮೀಟರ್ ಅಂತರದಲ್ಲಿರುತ್ತವೆ. ವಾದಿ ಹಾಗೂ ಪ್ರತಿವಾದಿಗಳು ಎಲ್ಲರೂ ಕೂಡಿ ಇದ್ದರೂ ಕೂಡಾ ನಾನು ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳಾದ ಪ್ರಮಾಣ ಪತ್ರವನ್ನು ಸಲ್ಲಿಸಿ ಅದರ ಪೂರಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.